ವಾರದ ಪತ್ರ

## ಡಯಾನಾ ದುರಂತ

ದೃಶ್ಯ ಮಾಧ್ಯಮಗಳು ತಮ್ಮ ಟಿ.ಆರ್.ಪಿ. ಹೆಚ್ಚಳಕ್ಕೆ ಜನರ ಖಾಸಗಿ ಬದುಕನ್ನು ಹರಾಜು ಹಾಕುತ್ತಿವೆ. ಈ ಸಂಬಂಧ ಅವರನ್ನು ಬೆನ್ನು ಹತ್ತುತ್ತಿವೆ. ಇಲ್ಲಸಲ್ಲದ್ದನ್ನೆಲ್ಲ ಪ್ರಸಾರ ಮಾಡುವ ಗೀಳಿಗೆ ಬಿದ್ದಿವೆ. ಕೆಲ ವರುಷಗಳಿಂದ ಹುಟ್ಟಿರುವ ಈ ಪಿಡುಗು 1997ರಲ್ಲಿ ಬ್ರಿಟಿಷ್ ರಾಜಾಮನೆತನದ ಯುವರಾಣಿ ಡಯಾನಾ ಅವರನ್ನು ಬಲಿ ಪಡೆದಿತ್ತು. ಎಲ್ಲರಿಗೂ ಅವರದೇ ಆದ ಬದುಕು, ಬವಣೆ, ಭಾವನೆ ಇರುತ್ತವೆ. ಇದನ್ನು ಅರಿತು ಮಾಧ್ಯಮಗಳು ಜವಾಬ್ದಾರಿಯುತವಾಗಿ ವರ್ತಿಸಲಿ.

—ಶಾಂತ ಕುಮಾರ್

## ಎಸ್‌ಪಿಬಿ ಹೆಸರಲ್ಲಿ ಬರಲಿ ‘ಸರಿಗಮಪ’

ಝೀ ಕನ್ನಡ ‘ಡ್ರಾಮಾ ಜೂನಿಯರ್’ ಚೆನ್ನಾಗಿ ಮೂಡಿಬರುತ್ತಿದೆ. ಮಕ್ಕಳು ಒಳ್ಳೆಯ ನಾಟಕಗಳನ್ನು ಆಡಿ ಜನರ ಮನಸ್ಸನ್ನು ಗೆದ್ದಿದ್ದಾರೆ. ಸಣ್ಣ ಮಕ್ಕಳ ‘ಸರಿಗಮಪ’ ಕೂಡ ಚೆನ್ನಾಗಿ ಬರುತ್ತಿತ್ತು. ಮಕ್ಕಳಿಗೆ ಸಂಗೀತ ಕಾರ್ಯಕ್ರಮ ಮತ್ತೆ ಆರಂಭವಾಗಲಿ. ಸಂಗೀತ ಪ್ರೇಮಿಗಳು ಮಕ್ಕಳ ಸಂಗೀತ ಕಾರ್ಯಕ್ರಮವನ್ನು ಕೇಳುವ ಸದವಕಾಶವನ್ನು ಝೀ ಟೀವಿ ಮಾಡಿಕೊಡಬೇಕು. ಸಾವಿರಾರು ಹಾಡುಗಳನ್ನು ಹಾಡಿದ ಎಸ್.ಪಿ. ಬಾಲಸುಬ್ರಮಣ್ಯ ಅವರ ನೆನಪಿಗಾಗಿ ಈ ಕಾರ್ಯಕ್ರಮ ಪ್ರಾರಂಭಿಸಿದರೆ ಇನ್ನೂ ಚೆನ್ನಾಗಿರುತ್ತದೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

## ‘ಚೂರಿ’ಗಳ ವೈಭವ

ದ್ವೇಷದಿಂದ ಮನಸೋ ಇಚ್ಛೆ ಚೂರಿಯಿಂದ ಚುಚ್ಚಿಚುಚ್ಚಿ ಕೊಲೆಗೈಯುವ ದೃಶ್ಯಗಳನ್ನು ಕನ್ನಡ ಸುದ್ದಿ ವಾಹಿನಿಗಳು ಇತ್ತೀಚೆಗೆ ನಿರಂತರವಾಗಿ ಪ್ರಸಾರ ಮಾಡಿದವು. ವೀಕ್ಷಕರು ಆ ದೃಶ್ಯಗಳನ್ನು ನೋಡಿ ನೋಡಿ ಭಯಭೀತರಾದ ಸಂದರ್ಭಗಳೇ ಜಾಸ್ತಿ. ಚೂರಿ ಹಾಕುವ ದೃಶ್ಯವನ್ನು ಅಬಾಲವೃದ್ಧರೆಲ್ಲರೂ ವೀಕ್ಷಿಸುತ್ತಾರೆ ಅನ್ನೋ ಪ್ರಜ್ಞೆ ವಾಹಿನಿಯವರಿಗೆ ಇದೆ ಎಂದು ಭಾವಿಸಿದರೂ, ಆ ದೃಶ್ಯಗಳು ನೋಡುಗರನ್ನು ಗಾಸಿಗೊಳಿಸುವ ಬಗ್ಗೆ ಅವರು ಚಿಂತಿಸಬೇಕಿತ್ತು.

ಚೂರಿ ಹಾಕಲು ಬಾರದವನೂ ಹೇಗೆ ಚೂರಿ ಹಾಕಬಹುದು ಅನ್ನೋದನ್ನೂ ಪ್ರಚೋದಿಸಿ ಕಲಿಸುವಂತೆ ಆ ದೃಶ್ಯವಿತ್ತು. ಏಕೆ ಇಂಥ ದೃಶ್ಯಗಳನ್ನು ವೈಭವೀಕರಿಸಿ ದಿನವಿಡೀ ಪ್ರಸಾರ ಮಾಡುತ್ತಿವೆ? ಕ್ರೌರ್ಯ ದೃಶ್ಯಗಳನ್ನು ನಿಷೇಧಿಸಬೇಕು.

—ಜಿ.ಹೆಚ್. ಸಂಕಪ್ಪ, ಚನ್ನಗಿರಿ

## ವಿಲಕ್ಷಣ ‘ಲಕ್ಷಣ’

ಕಲರ್ಸ್ ಕನ್ನಡದ ‘ಲಕ್ಷಣ’ದಲ್ಲಿ ಆಗಂತುಕನೊಬ್ಬ ಭೂಪತಿ ಮತ್ತು ನಕ್ಷತ್ರ ಅವರನ್ನು ಎಚ್ಚರತಪ್ಪಿಸಿ ತೊಂದರೆ ನೀಡುವುದನ್ನು ತೋರಿಸುತ್ತಾ ಅವನನ್ನು ಹಿಡಿಯುವಲ್ಲಿ ರಹಸ್ಯವಾದ ಏನನ್ನೋ ಭೇದಿಸಲಾಗುತ್ತಿದೆ ಎಂಬಂತೆ ತೋರಿಸಲಾಯಿತು. ಪ್ರೇಕ್ಷಕರಲ್ಲಿ ಇದು ಕಿಂಚಿತ್ತೂ ಕುತೂಹಲ ಮೂಡಿಸಲಿಲ್ಲ. ಇವೆಲ್ಲ ಬಾಲಿಶವಾಗಿ ಕಾಣಿಸುತ್ತಿವೆ. ಮನೆಯಿಂದ ಓಡಿ ಹೋಗುವುದೆಂದರೆ ಓಡೋಡಿಯೇ ಹೋಗಬೇಕೆ? ಹಾಸ್ಯಾಸ್ಪದ ಎನಿಸುತ್ತದೆ. ನಕ್ಷತ್ರಳನ್ನು ಹೊತ್ತೊಯ್ಯುವ ವೇಳೆ ಭೂಪತಿ ಎಚ್ಚರವಾಗಿಯೇ ಇರುತ್ತಾನೆ. ಆಗಲೇ ಆ ಆಗಂತುಕನನ್ನು ಹಿಡಿಯಬಹುದಿತ್ತಲ್ಲವೆ? ಅದನ್ನು ಬಿಟ್ಟು ಅವನನ್ನು ಬೆನ್ನಟ್ಟಿಕೊಂಡು ಹೋಗುವುದನ್ನೇ ವಾರಪೂರ್ತಿ ತೋರಿಸಲಾಯಿತು.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ‘ಜಾನಕಿ’ ಮರಳಲಿ

ಕಲರ್ಸ್ ಸೂಪರ್ ವಾಹಿನಿಯಲ್ಲಿ ‘ಮಗಳು ಜಾನಕಿ’ ಪ್ರಸಾರವಾಗುತ್ತಿತ್ತು. ಜನರ ಮನಸ್ಸನ್ನು ಸೂರೆಗೊಂಡಿದ್ದ ಆ ಧಾರಾವಾಹಿ ಅರ್ಧಕ್ಕೆ ನಿಂತಿದೆ. ಸಮಾಜದ ವಿವಿಧ ಸ್ತರಗಳನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದ್ದ ಧಾರಾವಾಹಿ ಕಾರಣಾಂತರದಿಂದ ನಿಂತಿದ್ದರಿಂದ ನಿರಾಸೆ ಮೂಡಿಸಿದೆ. ಈಗ ಅದನ್ನು ಮತ್ತೆ ಆರಂಭಿಸಿ ವೀಕ್ಷಕರಿಗೆ ಮುದ ನೀಡಬಹುದೇ?

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಮುಖಾಮುಖಿ ಆಗಲಿ

ಸಿರಿ ಕನ್ನಡದ ‘ಯುಗಾಂತರ’ ಚೆನ್ನಾಗಿ ಮೂಡಿಬರುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅದರಲ್ಲಿ ಕೆಲವು ಪರಿಚಿತ ಮುಖಗಳೂ ಇವೆ. ಹೆಸರೂ ತಿಳಿಯದ ಹೊಸ ಮುಖಗಳೂ ಇವೆ. ಆದ್ದರಿಂದ ಪ್ರತಿ ದಿನ ಬಿತ್ತರವಾಗುವಾಗ ಪಾತ್ರಧಾರಿಗಳ ಮುಖ ಪರಿಚಯ ಮಾಡಿಸಿದರೆ ಚೆನ್ನಾಗಿರುತ್ತದೆ. ಕೆಲವು ಪಾತ್ರಗಳು ಮುಖಾಮುಖಿ ಮಾತನಾಡದೆ ಕ್ಯಾಮೆರಾ ನೋಡಿದಂತೆ ಕಾಣಿಸುತ್ತವೆ. ಇದನ್ನು ತಪ್ಪಿಸಬಹುದು ಅಲ್ಲವೆ?

—ಅರುಣ್ ಕೆ.ಎಸ್.

ಸಿರಿ ಕನ್ನಡದ ಸೇತುರಾಂ ಅವರ ‘ಯುಗಾಂತರ’ವನ್ನು ಯೂಟ್ಯೂಬ್‌ನಲ್ಲಿಯೂ ನೋಡುವ ಅವಕಾಶ ಒದಗಿಸಿದ್ದಕ್ಕೆ ವಂದನೆಗಳು. ಅವರ ಹಿಂದಿನ ಧಾರಾವಾಹಿಗಳನ್ನು ನೋಡಿ ಆನಂದಿಸಿದ್ದೇವು. ಯುಗಾಂತರದ ಸಂಗೀತ ರಚನೆ, ಗಾಯನ, ಕಥೆ ಮತ್ತು ಸಂಭಾಷಣೆ ತುಂಬ ಚೆನ್ನಾಗಿವೆ. ನುರಿತ ನಟರು ಧಾರಾವಾಹಿಗೆ ಮೆರುಗು ತುಂಬಿದ್ದಾರೆ.

—ಸೀತಾ ಕೇಶವ, ಸಿಡ್ನಿ

## ನಾಟಕೀಯ ಕನ್ನಡತಿ

ಕಲರ್ಸ್ ಕನ್ನಡದ ‘ಕನ್ನಡತಿ’ಯಲ್ಲಿ ಭುವಿಯ ಸಪ್ತಪದಿ ಕೆಲವು ಅಡಚಣೆಗಳ ಮಧ್ಯ ನಡೆದಿದೆ. ಇನ್ನಾದರೂ ಧಾರಾವಾಹಿ ಅಂತ್ಯ ಕಾಣಬಹುದೇನೋ ಎಂದು ನಿರೀಕ್ಷಿಸಿದವರಿಗೆ ಭ್ರಮನಿರಸನವಾಗುತ್ತಿದೆ. ಹರ್ಷ, ಭುವಿ ಮತ್ತು ಅಮ್ಮಮ್ಮ ಅವರ ಸುತ್ತ ಗಿರಕಿ ಹೊಡೆಯುತ್ತಿದ್ದ ಧಾರಾವಾಹಿ ಈಗ ತನ್ನ ಸೂತ್ರವನ್ನು ಖಳನಾಯಕಿ ಸಾನಿಯಾ ಮತ್ತು ವಂಚಕಿ ಸೈಕೋ ವರೂಧಿನಿ ಕೈಗೆ ನೀಡಿದಂತಿದೆ.

ಹರ್ಷ, ಭುವಿ ಮತ್ತು ಅಮ್ಮಮ್ಮನ ಪ್ರತಿ ನಡೆಯಲ್ಲೂ ಇವರಿಬ್ಬರು ಮೂಗು ತೂರಿಸುವುದು ನೈಜ ಅನಿಸುವುದಿಲ್ಲ. ಆರಂಭದಿಂದಲೂ ಆಸಕ್ತಿ ಮತ್ತು ಕುತೂಹಲವನ್ನು ಉಳಿಸಿಕೊಂಡು ಬಂದ ಧಾರಾವಾಹಿ ಕೊನೆಯ ದಿನಗಳಲ್ಲಿ ಸಾಮಾನ್ಯ ಧಾರಾವಾಹಿಗಳಂತೆ ನಾಟಕೀಯ ಎನಿಸಿ ನಿರಾಶೆಗೊಳಿಸಿದೆ.

—ರಮಾನಂದ ಶರ್ಮಾ, ಬೆಂಗಳೂರು

## ಸವಿ ನೆನಪು

ದೂರದರ್ಶನ ಚಂದನದಲ್ಲಿ ವಾರಕ್ಕೊಮ್ಮೆ ಮೂಡಿ ಬರುವ ‘ನೂರೊಂದು ನೆನಪು’ ತುಂಬಾ ಚೆನ್ನಾಗಿದೆ. ಸಿನಿಮಾ ರಂಗದ ಸಾಧಕರ ಸಂದರ್ಶನದ ನಡುವೆ ಅವರು ಅಭಿನಯಿಸಿದ ಚಿತ್ರಗಳ ಗೀತೆಗಳನ್ನು ಗಾಯಕರು ಹಾಡುವ ಪರಿಯೂ ಮೆಚ್ಚುವಂತಿದೆ. ಇತ್ತೀಚೆಗೆ ನಟರಾದ ನೀರ್ನಳ್ಳಿ ರಾಮಕೃಷ್ಣ ಅವರ ಕಾರ್ಯಕ್ರಮ ಪ್ರಸಾರವಾಯಿತು. ಅವರು ತಮ್ಮ ಜೀವನದ ಹಲವಾರು ಅನುಭವಗಳನ್ನು ತೆರೆದಿಟ್ಟದ್ದು ಮನೋಜ್ಞವಾಗಿತ್ತು. ತಮಗೆ ಸ್ಫೂರ್ತಿಯಾದ, ನೆರವಾದ ಹಿರಿಯ ದಿಗ್ಗಜರನ್ನು ಅತ್ಯಂತ ವಿಧೇಯತೆಯಿಂದ ನೆನಪಿಸಿಕೊಂಡಿದ್ದು ಔಚಿತ್ಯಪೂರ್ಣವಾಗಿತ್ತು.

—ತಾರಾ ಹೆಗಡೆ, ಶಿರಸಿ

## ಅಟ್ಟಹಾಸದ ಅತಿರೇಕ

ಕಲರ್ಸ್ ಕನ್ನಡದ ‘ದೊರೆಸಾನಿ’ಯಲ್ಲಿ ಗಯ್ಯಾಳಿ ಪಾತ್ರವನ್ನು ವೀಕ್ಷಕರು ಅಸಹ್ಯ ಪಡುವ ಮಟ್ಟಿಗೆ ತೋರಿಸುವ ಅಗತ್ಯ ಇಲ್ಲ. ಆನಂದನ ಪ್ರೇಯಸಿಯ ಶ್ರೀಮಂತಿಕೆ, ದರ್ಪ ಕೆಟ್ಟದಾಗಿದೆ. ಮನೆಗೆಲಸದ ನಂಜಮ್ಮನ ಮೇಲೆ ಅವಳು ನಡೆಸುವ ದೌರ್ಜನ್ಯ, ದಬ್ಬಾಳಿಕೆ ಅತಿರೇಕದಿಂದ ಕೂಡಿದೆ. ಆನಂದನ ಕಂಪನಿಯ ಬೋರ್ಡ್ ರೂಮ್ ಪ್ರವೇಶಿಸಿ ಅಟ್ಟಹಾಸಗೈಯುವುದೂ ಹೆಚ್ಚೇ ಆಯ್ತು.

—ರಮಾನಂದ ಶರ್ಮಾ, ಬೆಂಗಳೂರು